## ಪದಬಂಧ



ಎಡದಿಂದ ಬಲಕ್ಕೆ:

1. ಇಷ್ಟೆಲ್ಲ ಪ್ರಯೋಗಗಳನ್ನು ಮಾಡಿದ್ದರ ಪ್ರಯೋಜನ ಏನು? 4
3. ಕಷ್ಟದಲ್ಲಿರುವವರನ್ನು ಕಂಡರೇ ಕಣ್ಣೀರು ಹರಿಸುವ ದಯಾಳು ಆಕೆ 3
4. ಆಡಿದ ವಾರ್ತೆಗಳನ್ನೆಲ್ಲ ಅಲ್ಲೇ ಬದಲಿಸುವುದು ಅದೆಂಥ ನಡೆವಳಿಕೆ? 3
6. ತುಂಬ ವಿಳಂಬಿಸುವ ಈ ವಿಧಾನವನ್ನು ಸರಳಗೊಳಿಸು 4
7. ಪ್ರತಿ ಕಾರ್ಯಕ್ಕೂ ಬೇಕೇ ಬೇಕು ಒಂದಾದರೂ ಸಲಕರಣೆ 4
9. ಆ ಪ್ರೇಮಿಗಳಿಗೆ ನೀಡಿದ ಬಳುವಳಿ ಹಳ್ಳ ಕೊಳ್ಳಗಳ ಈ ಬಂಜರು ನೆಲ 4
11. ನಾಕವೂ ಅಲ್ಲ, ನರಕವೂ ಅಲ್ಲ. ಇದಾವ ಜಗತ್ತು? 4
13. ತಾಪತ್ರಯದಲ್ಲಿ ಬಿಸಿ ತೆಗೆದು ಅಮೂಲ್ಯ ಮಣಿ ಮೂರಾಗಲಿ 4
15. ಸದಾ ಪ್ರತಾಪ ಕೊಚ್ಚುತ್ತಿದ್ದವನಿಗೆ ಈಗ ಬರೀ ದುಃಖ 4
17. ದಶ ವಿಧ ಯೋಗಗಳಿದ್ದು ಕೃಷ್ಣನಿಗೆ ಅಮ್ಮನಾದವಳು 3
18. ಇಂಥ ಪರಿಸರದಲ್ಲಿ ದೇವಾರ್ಪಿತ ವಸ್ತುವೂ ಹಿಂದುಮುಂದು 3
19. ಕೊಳವೆ ರಾಶಿ ಕಾಯಲು ಕೋಲಿನ ಬದಲು ತಂದದ್ದು ಕದ್ದ ಬಂದೂಕು! 4

ಮೇಲಿಂದ ಕೆಳಕ್ಕೆ:

1. ಎಲ್ಲವನ್ನೂ ಬಣ್ಣಿಸುವ ಮೊದಲು ಅದನ್ನು ಹೋಲುವ ಊಟ ಬರಲಿ 3
2. ಪ್ರತಿ ವೇಷಕ್ಕೂ ಒಪ್ಪುವಂತೆ ಮೂಗು ಬಾಯಿ ಮುಚ್ಚುವ ಬಟ್ಟೆ 3
3. ಈ ಕಾಳು ಕಡ್ಡಿ ರಾಶಿಯಲ್ಲಿ ಏನೋ ಒಂದು ದೋಷ 3
5. ನೂರು ಆಳುಗಳು ಬಂದರೂ ಬೆಂಬಿಡದು ಅವರದೇ ಛಾಯೆ 3
7. ಅವನ ಪಾಲಿನ ಕೆಲಸ ತಿಳಿದೊಡನೆ ಹೀಗೆ ಓಡಿಹೋಗುವುದೇ ? 4
8. ಸಾರನ್ನೇ ತಿರುವಿ ಪಕ್ವಗೊಳಿಸಿದ್ದು 'ರುಚಿ ತುಂಬಿದ ಅಡಿಗೆ' 4
9. ವ್ಯಾಪಾರದ ಆವಾರಕ್ಕೇ ನುಗ್ಗಿತು ಮಹಾಸಾಗರ 4
10. ಗುಮಾನಿ ತೋರುವುದೇಕೆ ? ಇದು ಉಳಿಸಿಟ್ಟ ಹಣ 4
12. ಹಳ್ಳಿಯಲ್ಲಿ ದೊರಕಿದ ಪುರಾತನ ಪಾತ್ರೆ ತಾಮ್ರ ವರ್ಗದ ಧಾತುವಿನದು 3
14. ಆತನ ಪ್ರಾಥಮಿಕ ಪರಿಶ್ರಮವೇ ಹಿಂದು ಮುಂದಾಯಿತೇ? 3
15. ದರ್ಪಕ್ಕೆ ಹೆದರದೆ ಎದುರಿಸಿದ್ದಕ್ಕೆ ಈ ಪಾರಿತೋಷಕ 3
16. ಪ್ರಥಮ ವರ್ಷದ ಸಾಧನೆಗೆ ಸಿಕ್ಕಿತು ಗೌರವದ ಸ್ಥಾನ 3

---

### 05–08–2021 ಉತ್ತರಗಳು

ಎಡದಿಂದ ಬಲಕ್ಕೆ:

1.ಅಪರೂಪ 3. ಅಭಾವ 4. ದಳ್ಳುರಿ 6. ನಿಶಾಚರ 7. ಅಯೋಮಯ 8. ಮುಜುಗರ 10. ಯಕ್ಷಲೋಕ 12. ಪರಿಪಾಟ 14. ಅನಾಮಿಕ 16. ನರೇಶ 17. ವಿಜಯ 18. ನವಲತೆ

ಮೇಲಿಂದ ಕೆಳಕ್ಕೆ:

1. ಅವನಿ 2. ಪದರ 3. ಅನುಮತಿ 5. ರಿವಾಜು 7. ಅಭಿಪ್ರಾಯ 9. ರಮ್ಯನೋಟ 11. ಲೋಚನ 13. ಪರಿಣಯ14. ಅಶನ (ಊಟ) 15. ಕವಿತೆ

ಪ್ರಶ್ನಾಂಕಣ

# ವೃಕ್ಷ: ಎಷ್ಟು ಅದರ ಮೌಲ್ಯ?

ವೃಕ್ಷ: ಅದು ಪೃಥ್ವಿಯ ಅತ್ಯಮೂಲ್ಯ ಸೃಷ್ಟಿ; ಅದರದು ಸುಲಭ ಗ್ರಾಹ್ಯವಲ್ಲದಷ್ಟು ಭಾರೀ ಮೌಲ್ಯ. ಆದರೆ ವೃಕ್ಷಗಳ ಮೌಲ್ಯ ಸಾರ್ವತ್ರಿಕವಾಗಿ ಸ್ಪಷ್ಟವಾಗಿ ತಿಳಿದಿಲ್ಲ. ಆದಕ್ಕೇ ಕ್ಷುಲ್ಲಕ ಕಾರಣಗಳಿಗೂ (ಎಂದರೆ ಸೌದೆಯಾಗಿ ಬಳಸಲು, ರಸ್ತೆ ಅಗಲಿಸಲು, ಕಟ್ಟಡ ಕಟ್ಟಲು... ಇತ್ಯಾದಿ) ಬೇರೆ ಪರ್ಯಾಯ ಪ್ರದೇಶಗಳಿದ್ದರೂ, ಉಪಾಯಗಳಿದ್ದರೂ ವೃಕ್ಷಗಳನ್ನೇ ಕ್ಷುಲ್ಲಕ ಸೃಷ್ಟಿಗಳೆಂಬಂತೆ ಭಾವಿಸಿ ಹನನ ಮಾಡಲಾಗುತ್ತಿದೆ. ಆದ್ದರಿಂದಲೇ ಅಡವಿಗಳು ಕುಗ್ಗುತ್ತಿವೆ; ನಗರಗಳಲ್ಲಿನ ವೃಕ್ಷಗಳು ಕಣ್ಮರೆಯಾಗುತ್ತಿವೆ. ಇದು ನಿರಂತರ ನಡೆಯುತ್ತಿರುವ, ಪೃಥ್ವಿಗೇ ವಿನಾಶಕರವಾಗುತ್ತಿರುವ ದಾರುಣ ದುರಂತ.

ಆದ್ದರಿಂದಲೇ ವೃಕ್ಷಗಳ ಮಹತ್ವ ಮತ್ತು ಅಗತ್ಯಗಳನ್ನು ಸಾಮಾನ್ಯರಿಗೂ ಸುಲಭ ಗ್ರಾಹ್ಯವಾಗಿ ಮನದಟ್ಟು ಮಾಡಲೆಂದು ಸಸ್ಯಶಾಸ್ತ್ರಜ್ಞರು ಮತ್ತು ಪರಿಸರ ತಜ್ಞರು ವೃಕ್ಷವೊಂದರ ಮೌಲ್ಯ ಎಷ್ಟೆಂಬುದನ್ನು ಹಣದ ರೂಪದಲ್ಲಿ ಲೆಕ್ಕಹಾಕಿದ್ದಾರೆ. ಅದೊಂದು ಸಂಕೀರ್ಣ ಲೆಕ್ಕಾಚಾರ.

ಅದಕ್ಕಾಗಿ ಪ್ರತಿ ವೃಕ್ಷವೂ ಭೂಮಿಯ ಪರಿಸರಕ್ಕೆ ಮತ್ತು ನಮ್ಮನ್ನೂ ಸೇರಿಸಿದಂತೆ ಇಡೀ ಜೀವಜಾಲಕ್ಕೆ ತಮ್ಮ ಜೀವಿತ ಕಾಲದಲ್ಲೂ, ಜೀವಿತಾನಂತರದಲ್ಲೂ ಒದಗಿಸುವ ಎಲ್ಲ ಪ್ರಯೋಜನಗಳನ್ನೂ ಪರಿಗಣಿಸಲಾಗಿದೆ. ಪ್ರತಿ ವೃಕ್ಷವೂ ಒದಗಿಸುವ ಆಮ್ಲಜನಕ, ಹೀರಿಕೊಳ್ಳುವ ಇಂಗಾಲದ ಡೈ ಆಕ್ಸೈಡ್ ಮತ್ತಿತರ ವಿಷ ವಸ್ತುಗಳು, ಅದು ನೀಡುವ ಎಲೆ, ಹಣ್ಣು ಇತ್ಯಾದಿ ಆಹಾರ (ಆಲ, ಬೇವು ಗಳಂಥ ವೃಕ್ಷಗಳ ಹಣ್ಣು ಮನುಷ್ಯರಿಗಲ್ಲದಿದ್ದರೂ ಇತರ ನೂರಾರು ಪ್ರಾಣಿ ಪಕ್ಷಿಗಳಿಗೆ ಸ್ವಾದಿಷ್ಟ ಆಹಾರ), ವೃಕ್ಷಗಳು ಒದಗಿಸುವ ಔಷಧೀಯ ವಸ್ತುಗಳು, ಇತರ ಸಾವಿರಾರು ಜೀವಿಗಳಿಗೆ ವಾಸಿಸಲು ನೀಡುವ ಆಶ್ರಯ... ಇತ್ಯಾದಿ. ಅಷ್ಟೇ ಅಲ್ಲದೆ, ನೆಲದ ಮಣ್ಣನ್ನು




ಮಳೆ ನೀರಲ್ಲಿ ಕೊಚ್ಚಿಹೋಗದಂತೆ ತಡೆಹಿಡಿಯುವ, ಗಾಳಿಯನ್ನು ತಂಪು ಮಾಡುವ, ಬಿರುಗಾಳಿಗಳ ವೇಗ ತಗ್ಗಿಸುವ, ಧೂಳನ್ನು ಅಡಗಿಸುವ , ವಾಯುಮಂಡಲಕ್ಕೆ ತೇವಾಂಶವನ್ನು ಮರುಪೂರಣ ಮಾಡುವ, ಸುಂದರ ಮನೋಲ್ಲಾಸಕರ ನಿಸರ್ಗ ದೃಶ್ಯಗಳನ್ನು ಸೃಜಿಸುವ... ಇಂತಹ ಅನನ್ಯ ಉಪಯೋಗಗಳನ್ನೂ, ಜೀವಿತಾನಂತರ ಒದಗುವ ಮರಮುಟ್ಟಿನ ಲಾಭವನ್ನೂ ಸೇರಿಸಿಕೊಳ್ಳಲಾಗಿದೆ; ಈ ಪ್ರತಿ ಪ್ರಯೋಜನದ ಮೌಲ್ಯವನ್ನೂ ಹಣದ ರೂಪಕ್ಕೆ ಪರಿವರ್ತಿಸಿ ಮೊತ್ತ ಮಾಡಲಾಗಿದೆ.

ತಜ್ಞರು ಮಾಡಿರುವ ಈ ಉತ್ಪ್ರೇಕ್ಷಾರಹಿತ, ವಸ್ತುನಿಷ್ಠ ಮೌಲ್ಯಮಾಪನದ ಪ್ರಕಾರ ಯಾವುದೇ ಒಂದು ವೃಕ್ಷದ ಸರಾಸರಿ 50 ವರ್ಷಗಳ ಜೀವಿತದ ಅವಧಿಯಲ್ಲಿ ಒದಗುವ ಎಲ್ಲ ಪ್ರಯೋಜನಗಳ ಒಟ್ಟು ಮೌಲ್ಯ ಕನಿಷ್ಠ ರೂ. ಒಂದು ಕೋಟಿ ನಲವತ್ನಾಲ್ಕು ಲಕ್ಷ (ರೂ. 14,400,000)! ಬಹಳ ವೃಕ್ಷಗಳು ಬದುಕಲು ಬಿಟ್ಟರೆ ಒಂದೆರಡು ನೂರು ವರ್ಷ ಕಾಲ ಬಾಳಬಲ್ಲವು (ಚಿತ್ರ 3) ಹೌದಲ್ಲ? ಅಷ್ಟೇ ಏಕೆ? ಸಾವಿರಾರು ವರ್ಷ ಕಾಲ ಬದುಕಿರಬಲ್ಲ ವೃಕ್ಷ ಪ್ರಭೇದಗಳೂ ಇವೆ (ಚಿತ್ರ 1, 2)! ಅಂಥ ವೃಕ್ಷಗಳ ಮೌಲ್ಯ ಎಷ್ಟಾದೀತು, ನೀವೇ ಯೋಚಿಸಿ.

■ ಎನ್. ವಾಸುದೇವ್